ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಮಂಡಳಿಯ ದರ ಪಟ್ಟಿಗಳ ಪ್ರಕಾರವೇ ಅಂದಾಜು ಪಟ್ಟಿಗಳನ್ನು ತಯಾರಿಸಲಾಗುತ್ತಿದೆ ಮತ್ತು ದರ ಪಟ್ಟಿಗಳ ಪ್ರಕಾರ ಹಣವನ್ನು ಪಾವತಿ ಮಾಡಲಾಗುತ್ತಿದೆ, ಲೇಬರ್ ಕಂಟ್ರಾಕ್ಟ್ ಬಿಲ್ಲುಗಳನ್ನು ಆದಷ್ಟು ಶೀಘ್ರಗತಿಯಲ್ಲಿ ಪರಿಶೀಲಿಸಿ, ವಿಲೇವಾರಿ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆದರೆ ಬಹಳ ಹಳೆಯ ಬಿಲ್ಲುಗಳನ್ನು ವಿಲೇವಾರಿ ಮಾಡಲು ಸಾಮಗ್ರಿಗಳ ಇನ್ವೆಂಟರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ವಿದ್ಯುತ್ ಗುತ್ತಿಗೆದಾರರೂ ಮಂಡಳಿಯೊಡನೆ ಸಹಕರಿಸುವುದು ಅಗತ್ಯವಾಗಿದೆ.

ಕಾಲ ಕಾಲಕ್ಕೆ ನಿಯಮಗಳನ್ನು ಬದಲಾಯಿಸಲಾಗುತ್ತಿದೆಯೆನ್ನುವ ಗುತ್ತಿಗೆದಾರರ ದೂರು ಸರಿಯಲ್ಲ. ಕೇವಲ ಗುತ್ತಿಗೆದಾರರ ಹಿತಾಸಕ್ತಿಗಳನ್ನು ಗಮನಿಸಿ. ನೀತಿ ನಿಯಮಗಳನ್ನು ರೂಪಿಸುವುದು ಏಕ ಪಕ್ಷೀಯವಾಗುತ್ತದೆ. ಗ್ರಾಹಕರು ಮಂಡಳಿಯ ಬೆನ್ನೆಲುಬುಗಳಾಗಿರುವುದರಿಂದ ಗ್ರಾಹಕರ ಹಿತರಕ್ಷಣೆಯನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಮುಷ್ಕರ ನಿರತ "ದಿ ಲೈಸನ್ಸ್ಡ್ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಅಸೋಸಿಯೇಶನ್ ಆಫ್ ಕರ್ನಾಟಕ" ದ ಪದಾಧಿಕಾರಿಗಳೊಂದಿಗೆ ಸಮಾಲೋಚನೆಯನ್ನು ಮಾಡಲಾಗುತ್ತಿದ್ದು, ಅವರ ನ್ಯಾಯಯುತ ಬೇಡಿಕೆಗಳನ್ನು ನಿಯಮಗಳ ಚೌಕಟ್ಟಿನೊಳಗೆ ಈಡೇರಿಸುವಲ್ಲಿ ಮಂಡಳಿಯು ಉತ್ಸುಕವಾಗಿದೆ.

(8) ರಾಜಾಜಿನಗರ ವ್ಯಾಪ್ತಿ ಹರಿಶ್ಚಂದ್ರಘಾಟನಲ್ಲಿ ಇರುವ ವಿದ್ಯುತ್ ಚಿತಾಗಾರದಿಂದ ಸುತ್ತ ಮುತ್ತ ನಿವಾಸಿಗಳಿಗೆ ಉಂಟಾಗಿರುವ ತೊಂದರೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹರಿಶ್ಚಂದ್ರ ಘಾಟಿನಲ್ಲಿ ಇರುವ ವಿದ್ಯುತ್ ಚಿತಾಗಾರದಿಂದ ಸುತ್ತ ಮುತ್ತಲಿನ ನಿವಾಸಿಗಳು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ನಿವಾಸಿಗಳು ಮಾಡಿರುವ ಅನೇಕ ಪ್ರಯತ್ನಗಳು ಫಲ ನೀಡಿಲ್ಲ. ಚಿತಾಗಾರದಿಂದ ಹೊರಬರುತ್ತಿರುವ ಹೊಗೆ, ವಾಸನೆ, ಧೂಳು ಅಲ್ಲಿನ ನಿವಾಸಿಗಳ ದೈನಂದಿನ ಜೀವನವನ್ನು ಜರ್ಜಿರಿತಗೊಳಿಸಿವೆ. ವಸತಿ ಗೃಹಗಳ ನಡುವೆ ಇದ್ದು ನಾಗರೀಕರ ಆರೋಗ್ಯಕ್ಕೆ ಮಾರಕವಾಗಿರುವ ಈ ಚಿತಾಗಾರವನ್ನು ಬೆಂಗಳೂರಿನ ಹೊರ ವಲಯಕ್ಕೆ ಸ್ಥಳಾಂತರ ಮಾಡುವ ಬಗ್ಗೆ ಹಾಗೂ ಈಗ ತುರ್ತಾಗಿ ಅಗತ್ಯ ಕ್ರಮ ಜರುಗಿಸಿ ಚಿತಾಗಾರದಿಂದ ನಿವಾಸಿಗಳಿಗೆ ಉಂಟಾಗುತ್ತಿರುವ ಸಂಕಷ್ಟವನ್ನು ಪರಿಹರಿಸಲು ತೆಗೆದುಕೊಳ್ಳಬೇಕಾದ ಅವಶ್ಯಕತೆಯ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಅಜಯಕುಮಾರ ಸರ್ ನಾಯಕ್ (ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರು) (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ವಿಲ್ಸನ್‌ಗಾರ್ಡನ್‌ನಲ್ಲಿರುವ ವಿದ್ಯುತ್ ಚಿತಾಗಾರಕ್ಕೆ ಇತ್ತೀಚೆಗೆ ಪ್ರಾಯೋಗಿಕವಾಗಿ ವಿದ್ಯುತ್‌ಚಿತಾಗಾರದಿಂದ ಹೊರ ಸೂಸುವ ವಾಸನೆಯನ್ನು ಕಡಿಮೆ ಮಾಡಲು ತೈಲ ಶುದ್ದೀಕರಣ ಉಪಕರಣವನ್ನು ಅಳವಡಿಸಲಾಗಿದ್ದು, ಇದು ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಸಾಕಷ್ಟು ಉಪಯೋಗವಾಗುತ್ತಿದೆ. ಆದರೆ ಇದರಲ್ಲಿರುವ ಒಂದು ಅನಾನುಕೂಲವೆಂದರೆ, ವಿದ್ಯುತ್ ಒಲೆಯಿಂದ ಬರುವ ಹೊಗೆಯು ಹೆಚ್ಚಿನ ಶಾಖದಿಂದ ಕೂಡಿರುವುದರಿಂದ ಮೇಲ್ಕಂಡ ತೈಲ ಶುದ್ದೀಕರಣ ಉಪಕರಣಕ್ಕೆ ಬೆಂಕಿ ಹತ್ತಿಕೊಳ್ಳುವ ಅಪಾಯವಿರುತ್ತದೆ. ಆದ್ದರಿಂದ ತೈಲ ಶುದ್ದೀಕರಣಕ್ಕೆ ಹೋಗುವ ಹೊಗೆಯು ಶಾಖವನ್ನು ಯಾವುದಾದರೂ ರೀತಿಯಲ್ಲಿ ಕಡಿಮೆ ಮಾಡಬೇಕಾಗಿರುತ್ತದೆ. ಹಾಗೂ ಇದನ್ನು ಎರಡು ರೀತಿಯಿಂದ ಮಾಡಬಹುದಾಗಿರುತ್ತದೆ.

ತೈಲ ಶುದ್ದೀಕರಣ ಉಪಕರಣವನ್ನು ವಿದ್ಯುತ್ ಚಿತಾಗಾರದ ಒಲೆಯಿಂದ ದೂರ ಇರುವುದರಿಂದಲೂ ಮತ್ತು ನೀರಿನ ಮಾಧ್ಯಮವನ್ನು ಅಳವಡಿಸುವುದರಿಂದಲೂ ಶಾಖವನ್ನು ಕಡಿಮೆ ಮಾಡಬಹುದು. ಇದು ತೈಲ ಶುದ್ದೀಕರಣ ಉಪಕರಣವು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೂ ಸಹಾಯವಾಗುತ್ತದೆ.

ಹರಿಶ್ಚಂದ್ರ ಘಾಟ್ ವಿದ್ಯುತ್ ಚಿತಾಗಾರಕ್ಕೆ ಇವೆಲ್ಲವುಗಳನ್ನು ಅಳವಡಿಸಿಕೊಂಡು ಅಂದರೆ, ನೀರಿನ ತೊಟ್ಟಿ ಮತ್ತು ತೈಲ ಶುದ್ದೀಕರಣ ಉಪಕರಣ, ಮುಂತಾದವುಗಳನ್ನು ಅಳವಡಿಸಿ 100 ಅಡಿಯ ಲೋಹದ ಹೊಗೆ ಗೂಡನ್ನು ಸುಮಾರು 30 ಲಕ್ಷ ರೂಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಕೂಡಲೇ ಈ ಕೆಲಸವನ್ನು ಕೈಗೆತ್ತಿಗೊಳ್ಳಲಾಗುವುದು. ಈ ಚಿತಾಗಾರವನ್ನು ಸದ್ಯದಲ್ಲಿ ಸ್ಥಳಾಂತರಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೆ, ಆದರೂ ಈ ಎಲೆಕ್ಟ್ರಿಸಿಟಿ ಕ್ರೆಮಿಟೋರಿಯಂ ಏನಿದೆ ಅದನ್ನು ಸ್ಥಾಪನೆ ಮಾಡಿದಾಗ ಅದು ನಗರದ ಹೊರಗೆ ಇತ್ತು. ಈಗ ಹೆಚ್ಚು ಕಡಿಮೆ ನಗರದ ಒಳಗಡೆಯಾಗಿದೆ. ಮಾನ್ಯ ಸದಸ್ಯರ ಕಳಕಳಿ ಏನಿದೆ ಸಾಧಾರಣ ವೊಲ್ಯೂಷನ್ ಒಂದೇ ಅಲ್ಲ it is hazardous to health also. ಆದ್ದರಿಂದ ಅದನ್ನು ಶಿಫ್ಟ್ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

(9) ಓ.ಡಿ.ಎ. ಬೆಂಬಲಿತ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗೆ ಒದಗಿಸಿದ ಹಣ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಓ.ಡಿ.ಎ. ಬೆಂಬಲಿತ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಒದಗಿಸಿದ ಒಟ್ಟು ಹಣವೆಷ್ಟು? ಇದರಲ್ಲಿ ಸರ್ಕಾರದ ಪಾಲು ಎಷ್ಟು? ಓ.ಡಿ.ಎ. ಕೊಡಮಾಡಿದ ಹಣ ಮರುಪಾವತಿ ಇದೆಯೇ? ಇದ್ದರೆ ಯಾವಾಗ ಈ ಯೋಜನೆಯಲ್ಲಿ ಯಾವೆಲ್ಲ ಜಿಲ್ಲೆಗಳನ್ನು ನಿಗದಿಪಡಿಸಲಾಗಿದೆ. ಈ ಯೋಜನೆಯು ಅನುಷ್ಠಾನಕ್ಕಾಗಿ ತರಬೇತಿಗೆ ವಿದೇಶಕ್ಕೆ ಕಳಿಸಲ್ಪಟ್ಟ ಅರಣ್ಯ ಅಧಿಕಾರಿಗಳ ಸಂಖ್ಯೆ ಎಷ್ಟು? ಈ ಯೋಜನೆಗಾಗಿ ತುಂಬಾ ಸಂಖ್ಯೆಯಲ್ಲಿ ಅನಗತ್ಯ ವಾಹನಗಳನ್ನು ಹೊಸದಾಗಿ ಕೊಂಡುಕೊಳ್ಳಲಾಗಿದೆ. ಯೋಜನೆಯ ಬಹುಭಾಗ ಹಣ ಇಂತಹ ಅಂಶಗಳಿಗಾಗಿ ಖರ್ಚು ಮಾಡುತ್ತಿರುವುದು ಸಾರ್ವಜನಿಕರಲ್ಲಿ ಸಂದೇಹಕ್ಕೆ ಎಡೆ ಮಾಡಿದೆ. ಈ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಸೂಕ್ತ ಪರಿಶೀಲನೆ ನಡೆಸಿ ಯೋಜನೆಯ ಹಣ ಯೋಗ್ಯ ರೀತಿ ಬಳಕೆಯಾಗುವಂತೆ ಕ್ರಮ ಕೈಗೊಳ್ಳಲು ಕೋರುತ್ತೇನೆ.

ಶ್ರೀ ಎಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಓಡಿಎ ಬೆಂಬಲಿತ ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಗೆ ಒದಗಿಸಿದ ಒಟ್ಟು ಹಣ ರೂ. 84.24 ಕೋಟಿ. ಓಡಿಎ ಯಿಂದ ಬಂದ ಅನುದಾನವನ್ನು ಭಾರತ ಸರ್ಕಾರ ರಾಜ್ಯ ಸರ್ಕಾರಕ್ಕೆ ಶೆ. 70 ಸಾಲವಾಗಿಯೂ ಹಾಗೂ ಶೇ. 30 ಅನುದಾನವಾಗಿಯೂ ಪರಿಗಣಿಸಿ ಬಿಡುಗಡೆ ಮಾಡಿದೆ. ಓಡಿಎ ಕೊಟ್ಟ ಹಣವನ್ನು ಓಡಿಎಗೆ ಮರುಪಾವತಿ ಮಾಡುವ ಅಗತ್ಯವಿಲ್ಲ. ಭಾರತ ಸರ್ಕಾರಕ್ಕೆ ಶೇ. 70 ರಷ್ಟನ್ನು ಮರುಪಾವತಿ ಮಾಡಬೇಕು.